**CC 2499/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 2499/2022**

**ಸಿ ಡಬ್ಲ್ಯೂ -6**
**ಪಿ ಡಬ್ಲ್ಯೂ -5**

**ಸಾಕ್ಷಿಯ ಹೆಸರು - ಖಾದರ್ ಬಾಷಾ**
**ತಂದೆಯ ಹೆಸರು - ಅಬ್ದುಲ್ ಸಾಬ್**
**ವಯಸ್ಸು - 47 ವರ್ಷಗಳು**
**ಉದ್ಯೋಗ - ಬೇಲ್ ದಾರ್**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ -4 ರವರ ಮನೆ ನನ್ನ ಮನೆಯ ಪಕ್ಕದಲ್ಲಿಯೇ ಇದ್ದು, ಸದರಿಯವರ ಮನೆ ಕಳ್ಳತನ ಆಗಿದೆ ಎಂದು ಪೋಲಿಸರು ನನಗೆ ತಿಳಿಸಿ ಸಾಕ್ಷಿಯಾಗುವಂತೆ ಕೇಳಿ ನನ್ನ ಸಹಿ ಪಡೆದಿರುತ್ತಾರೆ. ನನಗೆ ಬೇರೆ ವಿಚಾರಗಳು ಗೊತ್ತಿರುವುದಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 11-09-2022 ರಂದು ಬೆಳಗಿನ ಜಾವ 4.30 ಗಂಟೆಗೆ ಪಕ್ಕದ ಮನೆಯ ಬಾಗಿಲನ್ನು ಯಾರೋ ಬಡಿಯುತ್ತಿರುವಂತೆ ನಾನು ಮತ್ತು ಚಾಸಾ -5 ರವರು ಚಾಸಾ -4 ರವರ ಮನೆಯ ಹತ್ತಿರ ಹೋಗಿ ನೋಡಿರುತ್ತೇವೆ ಅಂದರೆ ಸರಿ. ಸದರಿ ಮನೆಯ ಕಬ್ಬಿಣದ ರಾಡ್ ಅನ್ನು ಯಾರೋ ಮುರಿದು ಕಳ್ಳತನ ಮಾಡಲು

ಪ್ರಯತ್ನಿಸಿರುವುದು ಗೊತ್ತಾಯಿತು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಾಡ್ ಮುರಿದಿದ್ದು ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆಯ ಕಿಟಕಿಯಿಂದ ಒಬ್ಬ ವ್ಯಕ್ತಿ ಹೊರಗೆ ಬಂದ ಅಂದರೆ ಸರಿ. ಆತನ ನಮ್ಮ ಏರಿಯಾದ ರಮೇಶ ಅಲಿಯಾಸ್ ಪರಶುರಾಮ ಅಂದರೆ ಪ್ರಕರಣದ ಆರೋಪಿ ಎಂದು ಗೊತ್ತಾಯಿತು ಅಂದರೆ ಸರಿ. ಈ ಬಗ್ಗೆ ಚಾಸಾ -1 ರವರು ದೂರು ನೀಡಿದ್ದು ಅಂದರೆ ಸರಿ. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ.

## ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಸಿ ಎಂ ವಕೀಲರಿಂದಃ

ಆರೋಪಿ ಕಿಟಕಿಯಿಂದ ಹಾರಿ ಬಂದಿದ್ದ ಮತ್ತು ಕಳ್ಳತನಕ್ಕೆ ಪ್ರತಿಯತ್ನಿಸಿದ್ದ ಎಂದು ಪೋಲಿಸರು ಹೇಳಿದ್ದರಿಂದ ನನಗೆ ಗೊತ್ತಾಗಿದೆ ಅಂದರೆ ಸರಿ. ಆ ರಾತ್ರಿ ನಾನು ಹೊರಗೆ ಬಂದಾಗ ಸ್ಥಳದಲ್ಲಿ ಯಾರೂ ಇರಲಿಲ್ಲ ಅಂದರೆ ಸರಿಯಲ್ಲ. ಆದಿನ ಚಾಸಾ -4 ರವರ ಮನೆಯ ಬಾಗಿಲಾಗಲೀ, ಮೇಲಿನ ಕಂಬಿಯಾಗಲೀ ಮುರಿದಿರಲಿಲ್ಲ ಅಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಅಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.